| ಆಲಿಸುವುದು | | | | |
|---|---|---|---|---|
| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
| 1 | ಪಠ್ಯವಸ್ತುವಿನಲ್ಲಿರುವ ಕಥೆಗಳನ್ನು / ಪದ್ಯಗಳನ್ನು / ನಾಟಕಗಳನ್ನು ಆಲಿಸಿ, ಅರ್ಥಮಾಡಿ ಕೊಳ್ಳುವರು. | ಶಿಕ್ಷಕರು ಹೇಳಿದ ಕಥೆಯನ್ನು ಆಲಿಸಿ, ಅರ್ಥ ಮಾಡಿಕೊಳ್ಳುತ್ತಾರೆ. | 1.1 ಕಥೆ ಕೇಳೋ ಜಾಣ<br>1.2 ಕಥೆ ಕೇಳಿ ಪದ ಬರೆ<br>1.3 ಆಲಿಸಿ - ವರ್ಗೀಕರಿಸಿ | 1.1 ಕಥೆಯನ್ನು ಆಲಿಸಿದ ನಂತರ ಕಥೆಗೆ ಸಂಬಂಧಿಸಿದ ಸರಳ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ.<br>1.2 ಕಥೆಯಲ್ಲಿ ಬಂದಿರುವ ಪದಗಳನ್ನು ಮನನ ಮಾಡಿಕೊಂಡು ಬರೆಯಿಸಿ.<br>1.3 ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದ ಹಲವಾರು ಪದಗಳನ್ನು ಮಿಶ್ರಣಮಾಡಿ ಹೇಳುವುದು, ಆಲಿಸಿದ ವಿದ್ಯಾರ್ಥಿಗಳು ಕ್ಷೇತ್ರಕ್ಕನುಗುಣವಾಗಿ ಪದಗಳನ್ನು ವರ್ಗೀಕರಿಸಿ ಆ ಪದಗಳ ಗುಂಪಿಗೆ ಒಂದೊಂದು ಹೆಸರನ್ನು ನೀಡಲು ಮಾರ್ಗದರ್ಶನ ನೀಡಿ.<br>ಉದಾ: ಕಪ್ಪು ಹಲಗೆ, , ಕೀಟನಾಶಕ, ಪ್ರಯೋಗಾಲಯ, ಉಳುಮೆ, ಸಮವಸ್ತ್ರ ,ಪೈರು, ಗ್ರಂಥಾಲಯ ನೇಗಿಲು ( ಶಾಲೆ, ಕೃಷಿ ) |
| 2 | | ಶಿಕ್ಷಕರು ವಾಚನ ಮಾಡಿದ ಪದ್ಯ ಭಾಗವನ್ನು ಆಲಿಸಿ. ಅರ್ಥಮಾಡಿಕೊಂಡು, ಸಾರಾಂಶವನ್ನು ಅರ್ಥಮಾಡಿಕೊಳ್ಳುತ್ತಾರೆ | 2.1 ಹಾಡು: ಮನನ ಮಾಡು"<br>2.2 ಹಾಡು ಕೇಳಿ – ಅರ್ಥ ತಿಳಿ"<br>2.3 ಮಧುರ ಮಧುರವೀ ಮಂಜುಳಗಾನ | 2.1 ಆಲಿಸಿದ ಪದ್ಯ ಭಾಗದಲ್ಲಿರುವ ಪದಗಳನ್ನು ಮನನ ಮಾಡಿಕೊಂಡು ಹೇಳಿಸಿ..<br>2.2 ಧ್ವನಿಸುರುಳಿಯಮೂಲಕ ಹಾಡುಗಳನ್ನು / ಪದ್ಯಗಳನ್ನು ಕೇಳಿಸಿ ಪದ್ಯಭಾಗದ ಸಾರಾಂಶವನ್ನು ಹೇಳಿಸಿ.<br>2.3 ವಿದ್ಯಾರ್ಥಿಗಳಿಗೆ ಇಷ್ಟವಾದ ಚಿತ್ರಗೀತೆಗಳನ್ನು ಹಾಡಿಸಿ. |
| 3 | | ಶಿಕ್ಷಕರು ಓದಿದ ಸರಳವಾದ ನಾಟಕದ ಭಾಗದಲ್ಲಿರುವ ಸಂಭಾಷಣೆಗಳನ್ನು ಆಲಿಸಿ, ಅರ್ಥಮಾಡಿಕೊಳ್ಳುತ್ತಾರೆ. | 3.1 ನಾಟಕಾಭಿನಯ<br>3.2 ನಾಟಕ ನೋಡಿ ಮಾತಾಡು<br>3.3 ಏಕಪಾತ್ರಾಭಿನಯ<br>3.4 ನಾಟಕ ಪ್ರದರ್ಶನ | 3.1 ಪ್ರತೀ ಗುಂಪಿಗೂ ಸರಳವಾದ ನಾಟಕದ ಆಯ್ದಭಾಗಗಳನ್ನು ನೀಡುವುದು. ವಿದ್ಯಾರ್ಥಿಗಳು ಓದಿ, ಪಾತ್ರವನ್ನು ಹಂಚಿಕೊಂಡು ಅಭಿನಯ ಮಾಡುವುದು.<br>3.2 ವಿದ್ಯಾಗಳಿಂದ ನಾಟಕದ ಸಾರವನ್ನು ಸರಳವಾಗಿ ಹೇಳಿಸಿ. |

| ಮಾತನಾಡುವುದು | | | | |
|---|---|---|---|---|
| 4 | ಸನ್ನಿವೇಶ ಘಟನೆಗಳನ್ನು ಕುರಿತು ನಿರರ್ಗಳವಾಗಿ ಹಾಗೂ ಸ್ಪಷ್ಟವಾಗಿ ಮಾತನಾಡು ವುದು. | ಸನ್ನಿವೇಶ ಘಟನೆಗಳನ್ನು ಕುರಿತು ನಿರರ್ಗಳವಾಗಿ ಹಾಗೂ ಸ್ಪಷ್ಟವಾಗಿ ಮಾತನಾಡುವರು. | 4.1 ಪರ : ವಿರೋಧ<br>4.2 ಪದ್ಯ ಓದು ಮಾತನಾಡು<br>4.3 ಪಾತ್ರಕ್ಕೊಂದು ಮಾತು | 4.1 ಸನ್ನಿವೇಶ / ಘಟನೆಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಒಬ್ಬನೆ ವಿದ್ಯಾರ್ಥಿಯೇ ಆ ವಿಷಯದ ಪರ ಹಾಗೂ ವಿರೋಧವಾಗಿ ಮಾತನಾಡುವಂತೆ ಸೂಚಿಸಿ.<br>ಉದಾ ; ಮಳೆಗಾಲ, ದೂರದರ್ಶನ ಇತ್ಯಾದಿ.<br>4.2 ವಿದ್ಯಾರ್ಥಿಗಳ ಪ್ರತೀ ಗುಂಪಿಗೆ ಒಂದೊಂದು ಹಳಗನ್ನಡ ಪದ್ಯಭಾಗವನ್ನು ನೀಡಿ, ಓದಿಸಿ, ಆಪದ್ಯದ ಬಗ್ಗೆ ಮಾತನಾಡಿಸಿ.<br>4.3 ಪದ್ಯಭಾಗದಲ್ಲಿ ಬಂದಿರುವ ಪಾತ್ರಗಳನ್ನು ನೀಡಿ ಮಾತನಾಡಿಸಿ. |
| 5 | | ಭಾಷಣ ಕಲೆ ,ಚರ್ಚೆ ಮತ್ತು ಸಂವಾದಗಳಲ್ಲಿ ಆಸಕ್ತಿ ಹೊಂದಿ ಮಾತನಾಡುತ್ತಾರೆ. | 5.1 ಆಶುಭಾಷಣ<br>5.2 ಮಾತಿಗೊಂದು ಮಾತು<br>5.3 ನನ್ನದೇ ಮಾತು | 5.1 ಪ್ರಚಲಿತ ಘಟನೆ, ವ್ಯಕ್ತಿ, ವಿಷಯ ಹಾಗೂ ಸ್ಥಳಗಳ ಬಗ್ಗೆ ಆಶುಭಾಷಣ ಏರ್ಪಡಿಸಿ..<br>5.2 ಒಬ್ಬ ವಿದ್ಯಾರ್ಥಿ ಮಾತನಾಡಿದ ಬಳಿಕ ಆ ವಿಷಯದ ಬಗ್ಗೆ ಉಳಿದವರಲ್ಲಿ ಕೆಲವರಿಂದ ಇನ್ನೇನು ಮಾತನಾಡಬಹುದಿತ್ತು ಎಂದು ಹೇಳಿಸುವುದು.<br>5.3ತಾನು ತಿಳಿದಿರುವ ವಿಷಯದ ಬಗ್ಗೆ ಸ್ವತಂತ್ರವಾಗಿ ಮಾತನಾಡಲು ಅವಕಾಶ ಕೊಡುವುದು. |
| 6 | | ಓದಿದ ಸನ್ನಿವೇಶ ಘಟನೆಗಳನ್ನು ನಿಜ ಜೀವನದೊಂದಿಗೆ ಹೋಲಿಸಿ ಮಾತನಾಡುತ್ತಾರೆ. | 6.1 ಪದ್ಯಕ್ಕೊಂದು ಚರ್ಚೆ<br>6.2 ಪದ್ಯ ಆಲಿಸಿ – ಕಥೆಹೇಳು<br>6.3 ಹೊಸಗನ್ನಡ ಪದ್ಯವಾಚನ | 6.1 ವಿದ್ಯಾರ್ಥಿಗಳ ಪ್ರತೀ ಗುಂಪಿಗೆ ಒಂದೊಂದು ಹೊಸಗನ್ನಡ ಪದ್ಯಭಾಗವನ್ನು ನೀಡಿ, ಪ್ರತೀ ಗುಂಪಿನ ವಿದ್ಯಾರ್ಥಿಗಳು ಪದ್ಯಭಾಗವನ್ನು ಓದಿದ ನಂತರ ಆ ಪದ್ಯದ ಕುರಿತು ಚರ್ಚೆಮಾಡುವಂತೆ ಸೂಚಿಸಿ.ಉಳಿದ ಗುಂಪಿನವರು ಪ್ರಶ್ನೆಗಳನ್ನು ಕೇಳುವಂತೆ ಸೂಚಿಸಿ.<br>6.2 ಪರಿಚಿತ ಪದ್ಯವನ್ನು ನೀಡಿ ಅದರ ಕಥೆಯನ್ನು ಹೇಳಿಸಿ.<br>6.3 ನಡುಗನ್ನಡ ಪದ್ಯವನ್ನು ಹೇಳಿಸಿ ಕವಿಯ ಜೀವನ ಸಾಧನೆಯ ಬಗ್ಗೆ ಮಾತನಾಡಿಸಿ. |

| | | | | |
|---|---|---|---|---|
| 7 | ವಿಷಯಾನುಸಾರ ಸಹಜ ಚರ್ಚೆ, ಸಂವಾದ, ವಿವರಣೆಗಳೊಂದಿಗೆ ಮಾತನಾಡುವರು. | ಆಲಿಸಿದ / ಓದಿದ ವಿಷಯವನ್ನು ಸ್ವಂತ ಮಾತುಗಳಲ್ಲಿ ತಿಳಿಸುವರು. | 7.1 ನನ್ನ ಮಾತು ನನ್ನದು<br><br>7.2 ಕವಿತೆಗೊಂದು ಮಾತು<br><br>7.3 ಪದ್ಯ ಕೇಳಿ ಮಾತನಾಡು | 7.1 ನುಡಿಗಟ್ಟುಗಳ ಪಟ್ಟಿಯನ್ನು ಮಾಡಿಸಿ, ಒಬ್ಬೊಬ್ಬರಿಂದ ಒಂದು ಪದವನ್ನು ಸ್ವಂತವಾಕ್ಯದಲ್ಲಿ ಬಳಸಿ ಮಾತನಾಡುವಂತೆ ತಿಳಿಸುವುದು.<br>7.2 ದಾಸರ ಪದಗಳು, ಕವಿತೆಗಳು,ವಚನಗಳನ್ನು …ಕೇಳಿಸುವುದು ಅಥವಾ ವಿದ್ಯಾರ್ಥಿಗಳಿಂದಲೇ ಹೇಳಿಸಿ. ಅವುಗಳ ಬಗ್ಗೆ ಮಾತನಾಡಿಸಿ.<br>7.3 ನಾಡು- ನುಡಿಗೆ ಸಂಬಂಧಿಸಿದ ಹೊಸಗನ್ನಡ ಕವಿತೆಗಳನ್ನು ಕೇಳಿಸಿ ಅದರ ಬಗ್ಗೆ ಮಾತನಾಡಿಸಿ |
| 8 | | ಆಲಿಸಿದ / ಓದಿದ ವಿಷಯವನ್ನು ಸಂಕ್ಷೇಪಿಸಿ ಸ್ವಂತ ಮಾತುಗಳಲ್ಲಿ ತಿಳಿಸುವರು. | 8.1 ಸಾರ- ಸಂಕ್ಷೇಪ.<br><br>8.2 ನಾನ್ ಕಥೆ ಹೇಳ್ತೀನಿ ನೀವ್ ಮಾತಾಡಿ"<br><br>8.3 ನಾನುಮೆಚ್ಚಿದ ಪಾತ.<br>8.4 ನಾನು ಮೆಚ್ಚಿದ ಕವಿ / ಲೇಖಕ. | 8.1 ದೃಕ್ ಶ್ರವಣದ ಮೂಲಕ ಕಥೆ / ಘಟನೆ / ಲಘು ಭಷಣಗಳನ್ನು ಕೇಳಿಸಿ ಅದರ ಬಗ್ಗೆ ಸಂಕ್ಷಿಪ್ತವಾಗಿ ವಿದ್ಯಾರ್ಥಿಗಳಿಂದ ಮಾತನಾಡಿಸುವುದು.<br>ಉದಾ; ಗುರುರಾಜ ಕರ್ಜಗಿ,ರಮೇಶ್ ಅರವಿಂದ್ ಅವರ ಭಾಷಣಗಳು.<br>8.2 ಕೆಲವು ವಿದ್ಯಾರ್ಥಿಗಳಿಂದ ಕಥೆ ಹೇಳೀಸಿ, ಆ ಕಥೆಯ ಬಗ್ಗೆ ಉಳಿದವರು ಪ್ರಶ್ನೆ ಕೇಳುವಂತೆಯು ಹಾಗೂ ಮಾತನಾಡುವಂತೆಯು ಮಾರ್ಗದರ್ಶನ ಮಾಡಿ.<br>8.3 ಹಿಂದಿನ ತರಗತಿಗಳಲ್ಲಿನ ಪಾಠಗಳಲ್ಲಿರುವ ಪಾತ್ರಗಳನ್ನು ಪಟ್ಟಿಮಾಡಿಸಿ ಅದರ ಬಗ್ಗೆ ಮಾತನಾಡಿಸಿ. |
| 9 | | ಮಾನವೀಯ ಮೌಲ್ಯಗಳನ್ನು ಗುರುತಿಸಿ ಹೇಳುವರು. | 9.1 ನಾನು ಕಂಡ ಮೌಲ್ಯ<br>9.2 ಮೌಲ್ಯಕ್ಕೊಂದು ಕಥೆ<br>9.3 ಮೌಲ್ಯಕ್ಕೊಂದು ಮಾತು | 9.1 ವಿದ್ಯಾರ್ಥಿಯು ತಾನು ಓದಿರುವ ಕಥೆ ಅಥವಾ ಘಟನೆಗಳಲ್ಲಿ ತಾನು ಗುರುತಿಸಿದ ಮೌಲ್ಯವನ್ನು ಕುರಿತು ಮಾತನಾಡುವಂತೆ ತಿಳಿಸಿ.<br>9.2 ವಿದ್ಯಾರ್ಥಿಗಳಿಗೆ ಮೌಲ್ಯಗಳನ್ನು ನೀಡಿ ಅದಕ್ಕೆ ಸಂಬಂಧಿಸಿದಂತೆ ಕಥೆಗಳನ್ನು ಹೇಳಲು ಅನುಕೂಲಿಸಿ<br>ಉದಾ; ಸತ್ಯ, ಪ್ರಾಮಾಣಿಕತೆ.....<br>9.3 ಮೌಲ್ಯಗಳನ್ನು ನೀಡಿ ಅವುಗಳ ಬಗ್ಗೆ ಮಾತನಾಡಲು ಮಾರ್ಗದರ್ಶನ ಮಾಡಿ.<br>ಉದಾ:ಪರೋಪಕಾರ,ಅಹಿಂಸೆ… |

| | | | | |
|---|---|---|---|---|
| 10 | ಚರ್ಚೆ ಮತ್ತು ಸಂಭಾಷಣೆಗಳಲ್ಲಿ ಭಾಗವಹಿಸಿ ತಾರ್ಕಿಕ ವಾದವನ್ನು ಮಂಡಿಸುವರು. | ನೀಡಿದ ವಿಷಯವನ್ನುಕುರಿತು ತಾರ್ಕಿಕವಾಗಿ ವಾದಮಾಡುತ್ತಾರೆ . | 10.1 ಚರ್ಚಾ ಸ್ಪರ್ಧೆ<br>10.2 ಊಹಿಸಿ ಮಾತನಾಡುವುದು.<br>10.3 ರೇ…! ಪ್ರಪಂಚ<br>10.4 ಘಟನೆಗೊಂದು ಮಾತು | 10.1 ಸಮಕಾಲೀನ ವಿಚಾರಗಳನ್ನು ಕುರಿತು ಚರ್ಚೆಯನ್ನು ಏರ್ಪಡಿಸುವುದು.<br>ಉದಾ: ಕೊರೋನಾ, ಲಾಕ್ ಡೌನ್, ಪರೀಕ್ಷೆ ರಹಿತ ಉತ್ತೀರ್ಣ.<br>10.2 ನಾನು ಶಿಕ್ಷಕನಾದರೆ? / ಶಿಕ್ಷಣ ಮಂತ್ರಿಯಾದರೆ? ಹೀಗೆ ವಿದ್ಯಾರ್ಥಿಯು ಊಹಿಸಿ ಮಾತನಾಡಲು ಮಾರ್ಗದರ್ಶನ ನೀಡಿ.<br>10.3 ಪೆಟ್ರೋಲ್-ಡೀಸೆಲ್ ಮುಗಿದು ಹೋದರೇ..!<br>ಮಳೆಯೇ ಬಾರದೆ ಹೋದರೇ…! ಈ ರೀತಿಯ ಹೇಳಿಕೆಗಳನ್ನು ನೀಡಿ ಮಾತನಾಡಿಸಿ.<br>10.4 ಪತ್ರಿಕೆಯಲ್ಲಿನ ಘಟನೆಗಳನ್ನು ಕುರಿತು ಮಾತನಾಡಿಸಿ. |
| 11 | | ನೀಡಿದ ವಿಷಯಕ್ಕೆ ಅನುಗುಣವಾಗಿ ಸಂವಾದ ನಡೆಸುತ್ತಾರೆ. | 11.1 ಸಂವಾದ<br>11.2 ಧನಾತ್ಮಕ – ಋಣಾತ್ಮಕ<br>11.3 ಹರಟೆ | 11.1 ಉಪಯುಕ್ತವಾದ ಶೈಕ್ಷಣಿಕ ವಿಚಾರಗಳನ್ನು ಕುರಿತು ಸಂವಾದವನ್ನು ಏರ್ಪಡಿಸುವುದು.<br>ಉದಾ: 1.ಕೊರೋನಾ ಸನ್ನಿವೇಶದ ಸಾಧಕ ಬಾಧಕಗಳು.<br>2. ಅಕ್ಷರ ದಾಸೋಹ" ಕಾರ್ಯಕ್ರಮದ ಮಹತ್ತ್ವ ಇತ್ಯಾದಿ……<br>11.2 ಒಂದೇವಿಚಾರನ್ನು ಕುರಿತು ಒಬ್ಬನೇ ವಿದ್ಯಾರ್ಥಿ ಸೂಚನೆಯನ್ನು ಅನುಸರಿಸಿ ಧನಾತ್ಮಕವಾಗಿ ಮತ್ತು ಋಣಾತ್ಮಕವಾಗಿ ಮಾತನಾಡಲು ಅನುಕೂಲಿಸಿ. |

| ಓದುವುದು | | | | |
|---|---|---|---|---|
| 12 | ವಿವಿಧ ಪದ ಗಳ ಉಚ್ಚಾರ ಣೆಯಲ್ಲಿರವ ಧ್ವನಿಸಾಮ್ಯತೆ ಮತ್ತು ಧ್ವನಿ ವ್ಯತ್ಯಾಸಗಳ ನ್ನು ಅರ್ಥ ಮಾಡಿಕಳ್ಳು ವುದು. | ಲೇಖನ ಚಿನ್ಹೆಗಳನ್ನು ಗಮನಿಸಿ, ಸ್ವರ ಭಾರದೊಂದಿಗೆ ದಿನಪತ್ರಿಕೆಗಳನ್ನು ಸ್ಪಷ್ಟವಾಗಿ ನಿರ್ಗಳವಾಗಿ ಓದುತ್ತಾರೆ' | 12.1 ಪತ್ರಿಕಾ ವಾಚನ"<br>12.2 ಓಲೆ – ಓದು<br>12.3 ಮೌನ ಓದು | 12.1 ಸಂಗ್ರಹಿಸಿದ ಪತ್ರಿಕಾ ಲೇಖನಗಳು / ವರದಿಗಳು, ಲೇಖನ ಚಿಹ್ನೆಗಳನ್ನು ಗಮನಿಸಿ, ಸ್ವರಭಾರದೊಂದಿಗೆ ನಿರ್ಗಳವಾಗಿ ಓದಲು ಅನುಕೂಲಿಸಿ.<br>12.3 ವಿದ್ಯಾರ್ಥಿಗಳಿಗೆ ಮೌನವಾಗಿ ಓದಲು ತಿಳಿಸಿ ಪರಸ್ಪರ ಪ್ರಶ್ನೆಗಳ ಮೂಲಕ ಉತ್ತರ ಪಡೆಯಲು ಅನುಕೂಲಿಸಿ. |
| 13 | | ಓದಿದ ಸಾಹಿತ್ಯದಲ್ಲಿನ ಪದಗಳ ಸಮಾನಾರ್ಥಕ ಭಿನಾರ್ಥಕ ವಿರುದ್ಧಾರ್ಥಕ ಪದಗಳನ್ನು ತಿಳಿಯುವರು. | 13.1 ಪದ ಬೇರ್ಪಡಿಸುವುದು<br>13.2 ಪುಸ್ತಕ ತೆರೆಯೋಣ; ಟಿಪ್ಪಣಿ ಬರೆಯೋಣ.<br>13.3 ಬರೆಯೋದು ನಾನು - ಓದೋದು ನೀನು | 13.1 ಸಮಾನಾರ್ಥಕ, ಭಿನ್ನಾರ್ಥಕ , ವಿರುದ್ಧಾರ್ಥಕ ಪದಗಳ ಮಿಂಚು ಪಟ್ಟಿಗಳನ್ನು ವಿದ್ಯಾರ್ಥಿಗಳ ತಂಡಕ್ಕೆ ನೀಡಿ ವಿಂಗಡಿಸುವಂತೆ ತಿಳಿಸಿ.<br>13.2ಗ್ರಂಥಾಲಯದಲ್ಲಿ ಲಭ್ಯವಿರುವ ನೀತಿ ಬೋಧಕ ಕಥೆಗಳ ಪುಸ್ತಕಗಳನ್ನು ನೀಡಿ, ಓದುವಂತೆ ಸೂಚಿಸಿ.<br>13.3 ಸ್ನೇಹಿತರ ಬರೆವಣಿಗೆಯನ್ನು ಅದಲು-ಬದಲು ಮಾಡಿಸಿ ಓದಿಸಿ. |
| 14 | ಸ್ವಕಲಿಕೆಗಾಗಿ ಶಬ್ಧಕೋಶ / ವಿಶ್ವಕೋಶ / ಇತರ ಆಕರ ಸಾಹಿತ್ಯಗ ಳನ್ನು ಬಳಸುವರು / ಉಪಯೋಗಿ ಸುವರು. | ಶಬ್ಧಕೋಶದಲ್ಲಿ ತಮಗೆ ಬೇಕಾದ ಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿ ಅರ್ಥೈಸಿಕೊಳ್ಳುತ್ತಾರೆ. | 14.1 ಕೋಶತೆರೆ - ಅರ್ಥಹುಡುಕು<br>14.2 ಪದಕ್ಕೊಂದು ವಿವರಣೆ<br>14.3 ನಾಟಕ -ಓದು | 14.1 ಪ್ರತೀ ಗುಂಪಿಗೂ ಪದಗಳ ಪಟ್ಟಿಯನ್ನು ನೀಡಿ, ಶಬ್ದಕೋಶವನ್ನು ಬಳಸಿ, ಅರ್ಥ ಹುಡುಕಿ, ಬರೆದು, ಓದುವಂತೆ ತಿಳಿಸಿ.<br>14.2 ಪಾರಿಭಾಷಿಕ ಪದಗಳನ್ನು ನೀಡಿ ವಿವರಣೆಯನ್ನು ಬರೆಯಿಸಿ ಓದಿಸಿ. |
| 15 | | ಓದಿದ ವಿಷಯಗಳ ಸಾರಾಂಶ ತಿಳಿಯುವರು. | 15.1 ವಚನ / ಕೀರ್ತನೆಗಳ ಗಾಯನ<br>15.2 ಪದ ಕೋಷ್ಟಕ<br>15.3 ಪದಬಳಸಿ - ವಾಕ್ಯ ರಚಿಸಿ<br>15.4 ಪದ – ಬಂಧ | 15.1 ವಚನ ಮತ್ತು ಕೀರ್ತನೆಗಳನ್ನು ಕೇಳಿಸಿ,ಪ್ರತೀ ಗುಂಪಿಗೂ ವಚನ ಹಾಗೂ ಕೀರ್ತನೆಗಳ ಮುದ್ರಿತ ಪ್ರತಿಯನ್ನು ನೀಡಿ ಗುಂಪಿನಲ್ಲಿ ಚರ್ಚಿಸಿ ಅವುಗಳ ಸಾರಾಂಶವನ್ನು ಬರೆಯಿಸಿ ಮಂಡನೆ ಮಾಡಿಸಿ.<br>15.2 ಸಮಾನಾರ್ಥಕ, ಭಿನ್ನಾರ್ಥಕ, ವಿರುದ್ಧಾರ್ಥಕ ಪದಗಳಿರುವ ವಿವಿಧ ಚೌಕಗಳನ್ನು ಸಿದ್ಧ ಪಡಿಸಿ ಸೂಚಿಸಿದ |

| | | | | |
|---|---|---|---|---|
| | | | | ಪದಗಳನ್ನು ಪಟ್ಟಿ ಮಾಡಿಸಿ ಓದಿಸಿ.<br>15.3 ದ್ವಿರುಕ್ತಿ –ಜೋಡುನುಡಿಗಳನ್ನು ನೀಡಿ ಸ್ವಂತ ವಾಕ್ಯ ಮಾಡಿಸಿ ಓದಿಸಿ. |
| | | **ಬರೆಯುವುದು** | | |
| 16 | ಸಮಾನಾರ್ಥಕ, ಭಿನ್ನಾರ್ಥಕಪದ ಮತ್ತು ಪದಪುಂಜಗಳನ್ನು ಬಳಸಿ ಬರೆಯುವುದು. | ಓದಿದ ಪಠ್ಯಭಾಗದಲ್ಲಿ ಬಂದ ಹೊಸಪದಗಳನ್ನು ಬರೆಯುತ್ತಾರೆ. | 16.1 ಉಕ್ತಲೇಖನ"<br>16.2 ಹೇಳುವೆ ನಾನು ಬರೆಯಿರಿ ನೀವು<br>16.3 ಕಥೆಯನ್ನು ಪೂರ್ಣಗೊಳಿಸುವುದು.<br>16.4 ಪೂರ್ಣ – ಅಪೂರ್ಣ | 16.1 ಹಿಂದಿನ ತರಗತಿಯ ಗದ್ಯ ಭಾಗವನ್ನು ಬಳಸಿಕೊಂಡು ಉಕ್ತಲೇಖನ ಬರೆಸುವುದು.ಆ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಸುವುದು.<br>16.2 ಒಬ್ಬೊಬ್ಬ ವಿದ್ಯಾರ್ಥಿಯು ತನಗೆ ಇಷ್ಟವಾದ ಪದವನ್ನು ಹೇಳೂವುದು ಉಳಿದವರು ಅದನ್ನು ಬರೆಯುವುದು ನಂತರ ಕಪ್ಪು ಹಲಗೆಯ ಮೇಲೆ ಬರೆಯಿಸಿವುದು.<br>16.4 ಗಾದೆಗಳ ಅರ್ಥಭಾಗವನ್ನು ಕಪ್ಪು ಹಲಗೆಯಲ್ಲಿ ಬರೆದು ಅದನ್ನು ಪೂರ್ಣಗೊಳಿಸಿ ಬರೆಯಲು ತಿಳಿಸಿ. |
| 17 | | ಹೊಸ ಪದಗಳನ್ನು ಬಳಸಿ ಅರ್ಥಗರ್ಭಿತ ವಾಕ್ಯಮಾಡುವರು. | 17.1 ಪದ ಹುಡುಕು ವಾಕ್ಯ ಮಾಡು<br>17.2 ಪದಬಳಸಿ - ವಾಕ್ಯ ರಚಿಸಿ<br>17.3 ದೃಶ್ಯ ನೋಡಿ ಬರೆ | 17.1 ಗದ್ಯಭಾಗವನ್ನು ನೀಡಿ ಓದಿಸುವುದು. ಅದರಲ್ಲಿ ವಿದ್ಯಾರ್ಥಿಗಳಿಗೆ ಇಷ್ಟವಾಗುವ ಹತ್ತು ಪದಗಳಿಗೆ ಸ್ವಂತವಾಕ್ಯ ರಚನೆ ಮಾಡಿಸಿ..<br>17.2ಜೋಡಿ ಪದ,ದ್ವಿರುಕ್ತಿ ಪದ ಮತ್ತು ಅನುಕರಣಾವ್ಯಯ ಪದಗಳನ್ನು ನೀಡಿ ಅವುಗಳನ್ನು ಬಳಸಿ ವಾಕ್ಯ ಮಾಡಿಸಿ.<br>17.3 ದೃಕ್ - ಶ್ರವಣೋಪಕರಣದಲ್ಲಿ ವಿಡಿಯೋ ತುಣುಕನ್ನು ತೋರಿಸಿ ಅದರ ಬಗ್ಗೆ ಬರೆಯಿಸಿ. |

| | | | | |
|---|---|---|---|---|
| 18 | | ಹೇಳಿದ ಕವಿತೆಯನ್ನು ಆಲಿಸಿ, ಅರ್ಥೈಸಿಕೊಂಡು, ಏಕೆ? ಹೇಗೆ? ಹಾಗಾದರೆ? ಹಾಗಾಗದಿದ್ದರೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಬರೆಯುತ್ತಾರೆ. | 18.1 ಸವಾಲ್ - ಜವಾಬ್<br>18.2 ಕಥನ – ಕವನ<br>18.3 ಚಿಂತನ - ಮಂಥನ. | 18.1 ಆಯ್ದ ಲೇಖನವನ್ನು ಶಿಕ್ಷಕರು ಓದಿ / ಓದಿಸಿ.<br>ಇದನ್ನಾಧರಿಸಿದ ಪ್ರಶ್ನೆಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ವಿದ್ಯಾರ್ಥಿಗಳಿಂದ ಉತ್ತರ ಬರೆಯಿಸಿ.<br>18.2 ಕಥನ ಕವನವನ್ನು ಓದಿಸಿ ಸಂಭಾಷಣಾ ರೂಪದಲ್ಲಿ ಬರೆಯಲು ಮಾರ್ಗದರ್ಶನ ನೀಡಿ.<br>18.3 ಕೆಲವು ತಾರ್ಕಿಕ ವಿಷಯಗಳನ್ನು ನೀಡಿ ಚಿಂತನೆ ಮಾಡಿಸಿ, ಏನು? ಏಕೆ/ ಹೇಗೆ? ಎಂಬುದರ ಬಗ್ಗೆ ಬರೆಯಿಸಿ.<br>ಉದಾ: ಮಳೆ . ಭೂಕಂಪ, ಗ್ರಹಣ….. |
| 19 | ಬರೆಹದಲ್ಲಿ ಸೃಜನಾತ್ಮಕತೆಯನ್ನು ತೋರ್ಪಡಿಸುವರು. | ಮೆಚ್ಚಿದ ವಿಷಯವನ್ನು ಸ್ವತಂತ್ರವಾಗಿ ಬರೆಯುವರು. | 19.1 ಚಿತ್ರ ನೋಡಿ ವಾಕ್ಯ ಬರೆ.<br>19.2 ಕಥೆ ಕಟ್ಟೋಣ ಬನ್ನಿ | 19.1 ಸನ್ನಿವೇಶಮತ್ತು ಘಟನೆಗಳನ್ನು ಬಿಂಬಿಸುವ ಚಿತ್ರಗಳನ್ನು ತೋರಿಸಿ ಸರಳವಾಕ್ಯಗಳನ್ನು ರಚನೆ ಮಾಡಿಸಿ.<br>ಉದಾ: ಲಾಕ್ ಡೌನ್,ಹಳ್ಳಿಯ ಸನ್ನಿವೇಶ ಇತ್ಯಾದಿ<br>19.2 ವಿದ್ಯಾರ್ಥಿಗಳಿಗೆ ಸುಳುಹುಗಳನ್ನು ನೀಡಿ ಮತ್ತು ಸೂಚನೆಗಳನ್ನು ನೀಡಿ ಕಥೆಬರೆಯಿಸಿ |
| 20 | ಸಂಧಿಗಳು / / ವಿಭಕ್ತಿ ಪ್ರತ್ಯಯ / ಕ್ರಿಯಾಪದ / ಅಲಂಕಾರ / ಛಂದಸ್ಸು ಮೊದಲಾದ ವ್ಯಾಕರಣದ ರಚನೆಗಳು ಮತ್ತು ತತ್ತ್ವಗಳನ್ನು ಅರ್ಥೈಸಿಕೊಳ್ಳುವರು. | ನೀಡಿದ ಪದಗಳಲ್ಲಿರುವ ಸಂಧಿಯನ್ನು ಬಿಡಿಸಿ, ಬರೆಯುತ್ತಾರೆ. | 20.1 ಚೀಟಿ ಎತ್ತಿಕೋ – ಗುಂಪು ಸೇರಿಕೋ<br>20.2 ಹೊಂದಿಸಿ ಬರೆಯಿರಿ<br>20.3 ಗುಂಪಿನಿಂದ ಹೊರಗೆತೆಗೆ | 20.1ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧರಿಸಿ ಪ್ರತೀ ಸಂಧಿಗೂ ಸಮನಾಗಿ ಸಂಧಿ ಪದಗಳನ್ನು ಬರೆದ ಚೀಟಿಗಳನ್ನು ಡಬ್ಬದಲ್ಲಿ ಹಾಕುವುದು.ಪ್ರತಿಯೊಬ್ಬ ವಿದ್ಯಾರ್ಥಿಯು ಒಂದೊಂದು ಚೀಟಿಯನ್ನು ತೆಗೆದು ಕೊಂಡು ಆಯಾಯ ಗುಂಪಿನಲ್ಲಿ ಸೇರಿಕೊಳ್ಳುವುದು. ಗುಂಪಿನಲ್ಲಿ ಪದಗಳನ್ನು ಬಿಡಿಸಿ ಬರೆಯಿಸಿ.<br>20.3 ಸಂಧಿ ಪದಗಳ ಉದಾಹರಣೆಗಳನ್ನು ನೀಡಿ ಸರಿಹೊಂದದ ಪದವನ್ನು ಗುರುತಿಸಿ ಬರೆಯಲು ತಿಳಿಸಿ |

| | | | | |
|---|---|---|---|---|
| 21 | | ನೀಡಿದ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಬರೆಯುತ್ತಾರೆ. | 21.1 ಪದಕ್ಕೊಂದು ಪ್ರತ್ಯಯ”<br>21.2 ಆರಿಸಿ – ಹೆಸರಿಸಿ”<br>21.3 ಪದವೊಂದು - ವಿಭಕ್ತಿ ಹಲವು | 21.1 ಕೆಲವು ನಾಮ ಪ್ರಕೃತಿಗಳನ್ನು ನೀಡಿ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಕ್ರಮವಾಗಿ ಬರೆಯಿಸಿ.<br>21.2 ಆಯ್ದ ಖಂಡಿಕೆಯೊಂದನ್ನು ನೀಡಿ ಆ ಭಾಗದಲ್ಲಿ ಬಂದಿರುವ ವಿಭಕ್ತಿಪ್ರತ್ಯಯ ಸಹಿತ ಪದಗಳನ್ನು ಆರಿಸಿ ಪಟ್ಟಿ ಮಾಡಿ ವಿಭಕ್ತಿಯನ್ನು ಹೆಸರಿಸಲು ತಿಳಿಸಿ.<br>21.3 ಕೆಲವು ನಾಮ ಪ್ರಕೃತಿಗಳನ್ನು ನೀಡಿ ಎಲ್ಲಾ ವಿಭಕ್ತಿ ಪ್ರತ್ಯಗಳನ್ನು ಕ್ರಮವಾಗಿ ಹಚ್ಚಿ ಬರೆಯುವಂತೆ ತಿಳಿಸಿ. |
| 22 | | ನೀಡಿದ ವಾಕ್ಯಗಳಲ್ಲಿರುವ ಕ್ರಿಯಾಪದಗಳನ್ನು ಗುರುತಿಸಿ, ಅವುಗಳಲ್ಲಿರುವ ಧಾತು, ಕಾಲಸೂಚಕ ಪ್ರತ್ಯಯ ಹಾಗೂ ಆಖ್ಯಾತ ಪ್ರತ್ಯಯಗಳನ್ನು ಗುರುತಿಸಿ ಬರೆಯುತ್ತಾರೆ. | 22.1 ಬನ್ನಿ ಹುಡುಕೋಣ<br>22.1 ಧಾತು ಗುರುತಿಸು<br>22.3 ಒಂದು ಧಾತು – ಹಲವು ಮಾತು<br>22.4 ಪದ ನಮ್ಮದು – ವಾಕ್ಯ ನಿಮ್ಮದು | 22.1ವಿದ್ಯಾರ್ಥಿಗಳು ತಿಳಿದಿರುವ ಕ್ರಿಯಾಪದಗಳನ್ನು ಪಟ್ಟಿ ಮಾಡಲು ತಿಳಿಸಿ.<br>22.2 ಪಠ್ಯ ಪುಸ್ತಕದ ನಿಗದಿತ ಭಾಗವೊಂದರಲ್ಲಿ ಬರುವ ಕ್ರಿಯಾಪದಗಳನ್ನು ಪಟ್ಟಿ ಮಾಡಿಸಿ ಧಾತುಗಳನ್ನು ಪ್ರತ್ಏಕಿಸಿ ಬರೆಯಲು ತಿಳಿಸಿ<br>22.3 ಧಾತುಗಳನ್ನು ನೀಡಿ ಕ್ರಿಯಾಪದದ ರೂಪಗಳನ್ನು ರಚಿಸಿ ಬರೆಯಿಸಿ.<br>**ಉದಾ**: ಓದು - ಓದಿದನು, ಓದುತ್ತಾನೆ, ಓದುವನು, ಓದಿದಳು, ಓದುತ್ತಾಳೆ, ಓದುವಳು, ಓದಿದರು,ಓದುತ್ತಾರೆ,ಓದುವರು…..<br>22.4 ವಿದ್ಯಾರ್ಥಿ ಗುಂಪುಗಳಿಗೆ ಐದ್ಐದು ಕ್ರಿಯಾಪದಗಳನ್ನು ಬರೆಯಿಸಿ. ಪರಸ್ಪರ ಗುಂಪುಗಳಲ್ಲಿ ಅದಲು- ಬದಲು ಮಾಡಿಸಿ ಅರ್ಥ ಪೂರ್ಣ ವಾಕ್ಯಗಳನ್ನು ವಾಕ್ಯಗಳನ್ನು ಮಾಡಿಸಿ. |
| 23 | | ಲೇಖನ ಚಿನ್ಹೆಗಳನ್ನು ಬಳಸಿ ಅರ್ಥಪೂರ್ಣ ವಾಕ್ಯಗಳನ್ನು ರಚಿಸುವರು. | 23.1 ಲೇಖನ ಚಿನ್ಹೆ ಬಳಸಿ ವಾಕ್ಯ ಮಾಡುವೆ.<br>23.2 ಲೇಖನ ಚಿನ್ಹೆ ಹುಡುಕುವೆ<br>23.3 ಹೊದಿಸಿ ಬರೆಯಿರಿ | 23.1 ಲೇಖನ ಚಿನ್ಹೆ ರಹಿತವಾದ ವಾಕ್ಯವನ್ನು ಬರೆಯಿಸಿ.ಆ ವಾಕ್ಯಗಳಿಗೆ ಸೂಕ್ತ ಲೇಖನ ಚಿನ್ಹೆಗಳನ್ನು ಬಳಸಿ ಬರೆಯುವಂತೆ ತಿಳಿಸಿ.<br>23.2 ನಿಗದಿತ ಗದ್ಯ ಭಾಗವನ್ನು ನೀಡಿ ಅದರಲ್ಲಿರುವ ಲೇಖನ ಚಿನ್ಹೆಗಳನ್ನು ಗುರುತಿಸಿ ಹೆಸರಿಸಲು ಅನುಕೂಲಿಸಿ. |

| | | | | |
|---|---|---|---|---|
| 24 | | ಬರೆಹಗಳಲ್ಲಿ ಔಚಿತ್ಯಪೂರ್ಣವಾಗಿ ಗಾದೆ, ನುಡಿಗಟ್ಟು,ಪದಪುಂಜಗಳನ್ನು ಬಳಸಿ ಬರೆಯುವರು. | 24.1 ನಾನರ್ಧ ನೀನರ್ಧ<br><br>24.2 ನುಡಿಗಟ್ಟಿಗೊಂದು ವಾಕ್ಯ ಕಟ್ಟು<br><br>24.3 ಒಂದು ಧಾತು – ಹಲವು ಮಾತು | 24.1 ಒಬ್ಬ ವಿದ್ಯಾರ್ಥಿ ಗಾದೆ ಅರ್ಧ ಭಾಗವನ್ನು ಹೇಳುವುದು ಮತ್ತೊಬ್ಬ ಉಳಿದ ಅರ್ಧ ಭಾಗವನ್ನು ಹೇಳಿ ಬರೆದು ಕೊಳ್ಳಲು ತಿಳಿಸಿ.<br>24.2 ನುಡಿಗಟ್ಟುಗಳನ್ನು ಹೇಳಿಸಿ ಮತ್ತು ಬರೆದು ಕೊಳ್ಳುವಂತೆ ತಿಳಿಸಿ ಅವುಗಳಿಗೆ ಸ್ವಂತವಾಕ್ಯ ರಚನೆ ಮಾಡಿಸಿ.<br>24.3 ಧಾತುಗಳನ್ನು ನೀಡಿ ಕ್ರಿಯಾಪದ ರೂಪಗಳನ್ನು ರಚಿಸಿ ಬರೆಯಿಸಿ.<br>**ಉದಾ**: ಓದು - ಓದಿದನು, ಓದುತ್ತಾನೆ, ಓದುವನು, ಓದಿದಳು, |
| 25 | ಪ್ರಬಂಧಗಳು ಪತ್ರಲೇಖನಗಳು ಮತ್ತು ಸಂಭಾಷಣೆಗಳನ್ನು ಸೂಕ್ತ ಲೇಖನ ಚಿನ್ಹೆಯೊಂದಿಗೆ ಬರೆಯುವರು. | ನಿರ್ದಿಷ್ಟ ಪಡಿಸಿದ ವಿಷಯಗಳ ಮೇಲೆ ಪ್ರಬಂಧಗಳನ್ನು , ಬರೆಯುತ್ತಾರೆ. | 25.1 ಓದಿ ಮಾದರಿಯಂತೆ ಬರೆ<br><br>25.2 ಬರೆ ಬರೆ - ಪ್ರಬಂಧ ಬರೆ<br><br>25.3 ನನಗಿಷ್ಟವಾದ ಪ್ರಬಂಧ | 25.1 ಸರಳವಾದ ಕೆಲವು ಪ್ರಬಂಧಗಳನ್ನು ನೀಡಿ ಓದಿಸಿ ಬರೆಯಿಸಿ.<br>25.2 ಪ್ರಬಂಧ ರಚನೆಯ ಹಂತಗಳ ಬಗ್ಗೆ ವಿವರಣೆ ನೀಡಿ, ನಿರ್ದಿಷ್ಟ ಸರಳವಾದ ವಿಷಯದ ಬಗ್ಗೆ ಪ್ರಬಂಧ ಬರೆಯಿಸಿ.<br>25.3 ವಿದ್ಯಾರ್ಥಿಗಳಿಗೆ ಇಷ್ಟವಾದ ಪ್ರಬಂಧವನ್ನು ಬರೆಯಲು ಅನುಕೂಲಿಸಿ. |
| 26 | | ನಿರ್ದಿಷ್ಟ ಪಡಿಸಿದ ವ್ಯವಹಾರಿಕ ಮತ್ತು ವೈಯಕ್ತಿಕ ಪತ್ರಗಳನ್ನು ಬರೆಯುತ್ತಾರೆ. | 26.1 ಮನವಿ ಪತ್ರ ಬರೆಯೋಣ ಮಿತ್ರ<br>26.2 ಸಮಸ್ಯೆಗೊಂದು ಪತ್ರ<br>26.3 ಶಾಲೆಗೊಂದು ಪತ್ರ | 26.1 ತರಗತಿಯ ಮೂಲೆಗಳಿಗೆ ವಿವಿಧ ಕಛೇರಿಯ ಹೆಸರುಗಳನ್ನು ಅಂಟಿಸುವುದು.ವಿದ್ಯಾರ್ಥಿ ಗುಂಪುಗಳಿಗೆ ಸಮಸ್ಯೆಗಳನ್ನು ಚರ್ಚಿಸಿ ಸಂಬಂಧಿಸಿದ ಕಛೇರಿಗಳಿಗೆ ಮನವಿ ಪತ್ರ ಬರೆಯಲು ಮಾರ್ಗದರ್ಶನ ಮಾಡಿ. ನಂತರ ಓದಿಸಿ ವಿದ್ಯಾರ್ಥಿಗಳು ಬರೆದು ಕೊಳ್ಳಲು ತಿಳಿಸಿ.<br>ಉದಾ: ಗ್ರಾಮ ಪಂಚಾಯಿತಿ,ತಾಲೂಕು ಕಛೇರಿ,ಜಿಲ್ಲಾಧಿಕಾರಿಗಳ ಕಛೇರಿ, ವಿದ್ಯುಚ್ಛಕ್ತಿ ನಿಗಮ |
| 27 | ಪದ್ಯ ಮತ್ತು ಕಥೆಗಳ ಮೂಲಕ ತಮ್ಮ ಆಲೋಚನೆಗಳನ್ನು ಮೌಖಿಕವಾಗಿ ಮತ್ತು | ನೀಡಿದ ಪದ್ಯ ಸಾರಾಂಶವನ್ನು ಆಲೋಚಿಸಿ ಅರ್ಥೈಸಿಕೊಂಡು ಬರೆಯುತ್ತಾರೆ. | 27.1 ಸಾರ ಸಂಗ್ರಹ<br>27.2 ಸಕ್ಷಿಪ್ತ ಬರವಣಿಗೆ<br>27.3 ಟಿಪ್ಪಣಿ ತಯಾರಿಕೆ | 27.1 ಆಯ್ದ ಪದ್ಯ ಭಾಗವೊಂದಕ್ಕೆ ಸಾರಾಂಶವನ್ನು ಬರೆಯಿಸಿ.<br>27.2 ಕಥೆಯನ್ನು ಹೇಳೀ ಸಂಕ್ಷಿಪ್ತವಾಗಿ ಬರೆಯಿಸಿ.<br>27.3 ಗದ್ಯ ಭಾವೊಂದನ್ನು ಆಯ್ಕೆ ಟಿಪ್ಪಣಿ ಬರೆಯಲು ಅನುಕೂಲಿಸಿ. |

| | | | | |
|---|---|---|---|---|
| | ಬರೆವಣಿಗೆಯ ರೂಪದಲ್ಲಿ ಕ್ರಿಯಾತ್ಮಕವಾಗಿ ಅಭಿವ್ಯಕ್ತಿಸುವರು. | | | |
| 28 | | ಗಾದೆಗಳನ್ನು ಸಂಗ್ರಹಿಸಿ ಅರ್ಥಬರೆದು ವಿಸ್ತರಿಸಿ ಬರೆಯುವರು. | 28.1 ಗಾದೆ ಸಂಗ್ರಹಿಸು<br>28.2 ವಿಸ್ತರಿಸು.<br>28.3 ಕಥೆ ಓದು – ಸಂಕ್ಷಿಪ್ತ ಮಾಡು | 28.1 ವಿದ್ಯಾರ್ಥಿಗಳನ್ನು ಹೇಳಿಸುವುದು, ಎಲ್ಲರೂ ಬರೆದು ಕೊಳ್ಳುವಂತೆ ಸೂಚಿಸಿ ಅವುಗಳಿಗೆ ಅರ್ಥ ಬರೆಯಿಸಿ.<br>28.2 ಗುಂಪುಗಳಿಗೆ ಗಾದೆಗಳನ್ನು ನೀಡಿ ಚರ್ಚಿಸಿ ವಿಸ್ತರಿಸಿ ಬರೆಯುವಂತೆ ತಿಳಿಸಿ. |
| 29 | ಮನವಿ ಪತ್ರಗಳು / ಅರ್ಜಿಗಳು / ದೂರು / ವರದಿ ಪತ್ರಗಳನ್ನು ಸ್ವತಂತ್ರವಾಗಿ ಬರೆಯುವರು. | ನೀಡಿದ ವಿಷಯಗಳನ್ನು ಕುರಿತು ಪತ್ರಗಳನ್ನು ಸ್ವತಂತ್ರವಾಗಿ ಬರೆಯುತ್ತಾರೆ. | 29.1 ಕುಶಲವೇ – ಕ್ಷೇಮವೇ<br>29.2 ತಂದೆ – ತಾಯಿಗೊಂದು ಪತ್ರ<br>29.3 ಮಿತ್ರನಿಗೊಂದು ಪತ್ರ | 29.1 ನೀಡಿದ ವಿಷಯಗಳನ್ನು ಆಧರಿಸಿ ವಿವಿಧ ಗುಂಪುಗಳಲ್ಲಿ ಪತ್ರ ಬರೆಯಿಸಿ.<br>ಉದಾ: ತಂದೆ,ತಾಯಿ,ಗೆಳೆಯ,ಗೆಳತಿ…<br>29.3 ವಿಷಯಗಳನ್ನು ನೀಡಿ ಇಷ್ಟವಾದ ಮಿತ್ರನಿಗೆ ಪತ್ರ ಬರೆಯಿಸಿ ಪೋಸ್ಟ್ ಮಾಡಿಸಿ. |
| 30 | | ನೀಡಿದ ವಿಷಯಗಳನ್ನು ಕುರಿತು ವರದಿಯನ್ನು ಸ್ವತಂತ್ರವಾಗಿ ಬರೆಯುತ್ತಾರೆ. | 30.1 ವರದಿಯ ಸರದಿ<br>30.2 ಶಾಲಾ ವರದಿ<br>30.3 ಗ್ರಾಮ ವರದಿ | 30.1 ವರದಿ ಸಿದ್ಧ ಪಡಿಸುವಬಗ್ಗೆ ವಿವರ ನೀಡಿ, ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿದ ಬಗ್ಗೆ ಮಾಹಿತಿ ನೀಡಿ ಪತ್ರಿಕಾ ವರದಿ ತಯಾರಿಸಲು ಸೂಚನೆ ನೀಡುವುದು.<br>ಉದಾ; ಗಣರಾಜ್ಯೋತ್ಸವ , ಕ್ರೀಡಾಕೂಟ<br>30.2 ಇಕೋ ಕ್ಲಬ್, ಸಾಹಿತ್ಯ ಸಂಘ ಕಾರ್ಯಕ್ರಗಳ ಬಗ್ಗೆ ವರದಿ ಬರೆಯಿಸಿ.<br>30.3 ಗ್ರಾಮದಲ್ಲಿರುವ ಸಂಘ ಸಂಸ್ಥೆಗಳು ಏರ್ಪಡಿಸುವ ವಿವಿಧ ಕಾರ್ಯಕ್ರಮಗಳನ್ನು ಕುರಿತು ವರದಿ ತಯಾರಿಸಲು ಮಾರ್ಗದರ್ಶನ ನೀಡಿ. |